## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

## SC.33/2024

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವಾನಂದ |
| ತಂದೆಯ ಹೆಸರು | : | ವೀರಪ್ಪ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 6

ಸಿ.ಡಬ್ಲ್ಯೂ 3

ದಿ: 29-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ನನಗೆ ಚಾಸಾ-2 ರವರ ಪರಿಚಯ ಇರುತ್ತದೆ. ನಾನು ದ್ವಿತಿಯ ಪಿಯುಸಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಈಗ ತೋರಿಸಿದ ನಿಪಿ-7 ರಲ್ಲಿ ನನ್ನ ಸಹಿಯನ್ನು ನಿಪಿ-7(ಬಿ) ಅಂತ ಗುರುತಿಸಲಾಯಿತು. ನಿಪಿ-8 ರ ಪೋಟೋದಲ್ಲಿ ನಾನು, ಚಾಸಾ-2, ಆರೋಪಿ ಮತ್ತು ಪೊಲೀಸರು ಇರುತ್ತಾರೆ. ದಿಃ 21-09-2022 ರಂದು ರಾತ್ರಿ ಸುಮಾರು 12.30-1.00 ಗಂಟೆ ಸಮಯದಲ್ಲಿ ದಾವಣಗೆರೆಯ ಹೈಸ್ಕೂಲ್ ಮೈದಾನದಲ್ಲಿ ಹಿಂದೂ ಮಹಾಗಣಪತಿ ಸಂಬಂಧಪಟ್ಟ ಕೆಲಸ ಮಾಡುತ್ತಿರುವಾಗ ನಿಪಿ-7 ಕ್ಕೆ ಸಹಿ ಮಾಡಿದ್ದೇನೆ. ನಾವು ಕೆಲಸ ಮಾಡುತ್ತಿರುವಾಗ ಪೊಲೀಸರು ರಮೇಶ ನಾಯ್ಕ ಎಂಬ ವ್ಯಕ್ತಿಯನ್ನು ಕರೆದುಕೊಂಡು ಬಂದಿದ್ದರು. ನನ್ನ ಸಮಕ್ಷಮ ಚಾಕುವನ್ನು

ವಶಪಡಿಸಿಕೊಂಡರು. ಆ ಚಾಕುವನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ.3 ಅಂತ ಗುರುತಿಸಲಾಗಿದೆ. ನಿಪಿ-8 ರ ಫೋಟೋದಲ್ಲಿ ರಮೇಶ ನಾಯ್ಕರವರ ಕೈಯಲ್ಲಿ ನ್ಯಾಯಾಲಯದ ಮುಂದೆ ಇರುವ ಮು.ಮಾ.3 ರ ಚಾಕು ಇರುತ್ತದೆ. ಅದು ಯಾವ ವಿಚಾರ ಅಂತ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಚಾಕುವನ್ನು ವಶಪಡಿಸಿಕೊಂಡರು. ಗಲಾಟೆ ಯಾರ ಜೊತೆ ಆಯಿತು ಅಂತ ನನಗೆ ಗೊತ್ತಿಲ್ಲ. ನಿಪಿ-7 ರ ಮಹಜರ ಮಾಡುವ ಕಾಲಕ್ಕೆ ಇದ್ದ ರಮೇಶ ನಾಯ್ಕ ಅಂದರೆ ಈ ದಿನ ನ್ಯಾಯಾಲಯದಲ್ಲಿ ಇರುವ ಆರೋಪಿ ಇರುತ್ತಾರೆ. ಆರೋಪಿಯನ್ನು ಸಾಕ್ಷಿದಾರರು ನೋಡಿ ಗುರುತಿಸುತ್ತಾರೆ. ಆರೋಪಿ ನಿಪಿ-8 ರಲ್ಲಿ ಕಂಡು ಬರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸರ್ಕಾರಿ ಅಭಿಯೋಜಕರು ಕೋರಿರುತ್ತಾರೆ. ವಾದ ಕೇಳಿ ದಾಖಲೆ ಪರಿಶೀಲಿಸಿ ಅನುಮತಿ ಕೊಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**:

2. ದಿಃ 21-09-2022 ರಂದು ಸಂಜೆ 5.00 ಗಂಟೆಗೆ ಚಾಸಾ-1 ರವರಿಗೆ ನ್ಯಾಯಾಲಯದ ಮುಂದೆ ಇರುವ ಆರೋಪಿಯು ಚಾಕುವಿನಿಂದ ಹೊಡೆದು ಕೊಲೆ ಮಾಡಲು ಪ್ರಯತ್ನ ಮಾಡಿರುತ್ತಾರೆ ಮತ್ತು ಆತನ ವಿರುದ್ಧ ಪ್ರಕರಣ ದಾಖಲೆ ಆಗಿದೆ ಅಂತ ಪೊಲೀಸರು ನನಗೆ ತಿಳಿಸಿದರು ಅಂದರೆ ನಿಜ. ಆ ಸಮಯದಲ್ಲಿ ಆ ಚಾಕುವನ್ನು ತೋರಿಸಲು ಪೊಲೀಸರ ಜೊತೆ ಆರೋಪಿ ಬಂದಿದ್ದರು ಅಂದರೆ ನಿಜ. ಆರೋಪಿಯು ಮಂಡಕ್ಕಿ ಕೈ ಗಾಡಿ ನಡೆಸುತ್ತಿದ್ದು, ಅವರು ಚಾಕುವನ್ನು ಕೈಗಾಡಿಯಿಂದ ತೆಗೆದುಕೊಟ್ಟರು ಅಂದರೆ ನಿಜ. ಅದನ್ನು ಪೊಲೀಸರು ವಶಪಡಿಸಿಕೊಂಡು ಮಹಜರ ಮಾಡಿದರು ಅಂದರೆ ನಿಜ.

**ಪಾಟೀ ಸವಾಲುಃ ಶ್ರೀ ಎಸ್.ಜೆ.ಕೆ., ವಕೀಲರಿಂದ ಆರೋಪಿತರ ಪರವಾಗಿ**:

3. ಘಟನೆಯನ್ನು ನಾನು ಖುದ್ದಾಗಿ ನೋಡಿಲ್ಲ, ಘಟನೆಯನ್ನು ಪೊಲೀಸರು ಹೇಳಿದರು ಅಂದರೆ ನಿಜ. ನಿಪಿ-7ರ ಪಂಚನಾಮೆಯಲ್ಲಿ ಏನೇನು ಬರೆದಿದೆ ಅಂತ ನನಗೆ ಗೊತ್ತಿಲ್ಲ ಅಂದರೆ ನಿಜ. ನಾನು ಹೈಸ್ಕೂಲ್ ಮೈದಾನದ ಬಳಿ ವಾಸ ಇರುವುದಿಲ್ಲ. ಪೊಲೀಸರು ನನಗೆ ಗಲಾಟೆಯಾಗುತ್ತಿರುವುದಾಗಿ ಕರೆಸಿದ್ದರು. ಗಣಪತಿ ಸ್ಟ್ಯಾಚು ಬಳಿ ನಮ್ಮನ್ನು ಕರೆಸಿದ್ದರು. ಗಣೇಶನ ಪ್ರತಿಷ್ಠಾನೆ ನಿಪಿ-8ರಲ್ಲಿ ಕಂಡು ಬರುವುದಿಲ್ಲ ಅಂದರೆ ನಿಜ. ಮು.ಮಾ.3 ರಂತಹ ಚಾಕು ಮಾರ್ಕೆಟ್ ನಲ್ಲಿ ಸಿಗುತ್ತವೆ ಅಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ಆರೋಪಿಯು ತನ್ನ ಅಂಗಡಿಯಿಂದ ತೆಗೆದುಕೊಟ್ಟಿರುತ್ತಾರೆ. ನಿಪಿ-8ರಲ್ಲಿ ದೇವರ ಮೂರ್ತಿ ಕಾಣುತ್ತಿಲ್ಲ ಅಂದರೆ ನಿಜ. ನಿಪಿ-8ರಲ್ಲಿ ಹೈಸ್ಕೂಲ್ ಮೈದಾನ ಕಾಣುತ್ತಿಲ್ಲ ಅಂದರೆ ರಾತ್ರಿ ಕತ್ತಲಾಗಿದ್ದರಿಂದ ಕಾಣುತ್ತಿಲ್ಲ. ಬೇರೆ ಎಲ್ಲೋ ತೆಗೆದಿದ್ದ ಪೋಟೋವನ್ನು edit ಮಾಡಿದ್ದೇವೆ ಅಂದರೆ ಸರಿಯಲ್ಲ. ನಾನು ಮತ್ತು ದೂರುದಾರರು ವಿಶ್ವಾಸಗಾರರು ಆದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ದೂರುದಾರರು ಯಾರು ಅಂತನೇ ನನಗೆ ಗೊತ್ತಿಲ್ಲ. ಚಾಕುವಿನಿಂದ ಹೊಡೆದಿದ್ದು ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮಹಜರನ್ನು ಬರೆದುಕೊಂಡರು ಅದಕ್ಕೆ ನಾನು ಸಹಿ ಮಾಡಿದ್ದೇನೆ. QR code ಇತ್ಯಾದಿ ಏನು ಅಂತ ನನಗೆ ಗೊತ್ತಿಲ್ಲ. ಮಹಜರನ್ನು ಪೊಲೀಸ್ ಠಾಣೆಯಲ್ಲಿ ಸೃಷ್ಟಿ ಮಾಡಿದ್ದು, ಅದಕ್ಕೆ ನಾನು ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ.

4. ಹೈಸ್ಕೂಲ್ ಮೈದಾನದ ಹತ್ತಿರ ಸಾಕಷ್ಟು ಮನೆಗಳು ಇವೆ. ಪೊಲೀಸರು ಪಂಚನಾಮೆಯ ಸಮಯದಲ್ಲಿ ಅವರ ಪೈಕಿ ಯಾರನ್ನು ಕರೆಸಿರಲಿಲ್ಲ. ದೂರುದಾರರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.